ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು): ಅ) 69 ಚಾಲ್ತಿಯಲ್ಲಿರುವ ಕುಡಿಯುವ ನೀರು ಸರಬರಾಜು ಯೋಜನೆಗಳಿವೆ. ವಿವರಗಳು ಕೆಳಗಿನಂತಿವೆ.

| ತಾಲ್ಲೂಕು | ಕೊಳವೆನೀರು ಸರಬರಾಜು ಯೋಜನೆ | ನಲ್ಲಿ ನೀರು ಸರಬರಾಜು ಯೋಜನೆ | ಒಟ್ಟು |
|---|---|---|---|
| ಸಕಲೇಪುರ | 17 | 13 | 30 |
| ಆಲೂರು | 34 | 5 | 39 |
| ಒಟ್ಟು | 51 | 18 | 69 |

ಆ) ಮುಗಿದಿರುವ ಯೋಜನೆಗಳು

| ತಾಲ್ಲೂಕು | ಕೊಳವೆನೀರು ಸರಬರಾಜು ಯೋಜನೆಗಳು | ಕಿರುನೀರು ಸರಬರಾಜು ಯೋಜನೆಗಳು | ಒಟ್ಟು |
|---|---|---|---|
| ಸಕಲೇಪುರ | 1 | 3 | 4 |
| ಆಲೂರು | 13 | 2 | 15 |
| ಒಟ್ಟು | 14 | 5 | 19 |

ವಿದ್ಯುತ್ ಸರಬರಾಜು ಇಲ್ಲದಿರುವ ಆದರೆ ಮುಗಿದಿರುವ ಯೋಜನೆಗಳು

| ತಾಲ್ಲೂಕು | ಕೊಳವೆನೀರು ಸರಬರಾಜು ಯೋಜನೆಗಳು | ಕಿರುನೀರು ಸರಬರಾಜು ಯೋಜನೆಗಳು | ಒಟ್ಟು |
|---|---|---|---|
| ಸಕಲೇಶಪುರ | 2 | 3 | 5 |
| ಆಲೂರು | 3 | - | 3 |
| ಒಟ್ಟು | 5 | 3 | 8 |

ಇ) ಸಾಮಾನ್ಯವಾಗಿ, ಕೊಳವೆ ನೀರು ಸರಬರಾಜು ಯೋಜನೆಯನ್ನು ಮುಗಿಸಲು ಮೂರು ವರ್ಷಗಳು ಮತ್ತು ಕಿರುನೀರು ಸರಬರಾಜು ಯೋಜನೆಯನ್ನು ಮುಗಿಸಲು ಒಂದು ವರ್ಷ ನಿಗದಿ ಮಾಡಲಾಗಿದೆ.

**ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ಪ್ರಕರಣ**

228 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

*ಅ) ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ಪ್ರಕರಣಗಳೆಷ್ಟು ?*

*ಅ) ಪ್ರಕರಣಗಳ ಶೀಘ್ರ ವಿಲೇವಾರಿಗೆ ತೆಗೆದುಕೊಂಡಿರುವ ಹಾಗೂ ತೆಗೆದುಕೊಳ್ಳಬೇಕೆಂದಿರುವ ಕ್ರಮಗಳೇನು ?*

ಶ್ರೀ ಯಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ವಿವಿಧ ಪ್ರಕರಣಗಳು (31ನೇ ಡಿಸೆಂಬರ್ 1995ರಲ್ಲಿ ಇದ್ದಂತೆ)

| | ನ್ಯಾಯಾಲಯಗಳ ಹೆಸರು | ಸಿವಿಲ್ | ಕ್ರಿಮಿನಲ್ | ಒಟ್ಟು |
|---|---|---|---|---|
| 1. | ಉಚ್ಚ ನ್ಯಾಯಾಲಯ | 1,56,484 | 5,009 | 1,61,493 |
| 2. | ಸಿಟಿ ಸಿವಿಲ್ ಕೋರ್ಟ್, ಬೆಂಗಳೂರು | 72,424 | 2,833 | 75,257 |
| 3. | ಜಿಲ್ಲಾ ಮತ್ತು ಸೆಷನ್ಸ್ ಜಡ್ಜ್ ಕೋರ್ಟುಗಳು | 48,129 | 23,426 | 71,555 |
| 4. | ಕುಟುಂಬ ನ್ಯಾಯಾಲಯ, ಬೆಂಗಳೂರು, ಬಿಜಾಪುರ ಮತ್ತು ಬೆಳಗಾಂ | 3,661 | 2,623 | 6,284 |
| 5. | ಸಿವಿಲ್ ಜಡ್ಜ್ ಕೋರ್ಟುಗಳು | 2,03,415 | 38,552 | 2,41,968 |
| 6. | ಲಘು ವ್ಯಾಜ್ಯಗಳ ನ್ಯಾಯಾಲಯ, ಬೆಂಗಳೂರು | 40,452 | - | 40,452 |
| 7. | ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಮತ್ತು ಹೆಚ್ಚುವರಿ ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ಸ್, ಬೆಂಗಳೂರು | - | 64,129 | 64,129 |
| 8. | ಸಂಚಾರಿ ನ್ಯಾಯಾಲಯಗಳು, ಬೆಂಗಳೂರು | - | 2,53,010 | 2,53,010 |
| 9. | ಮುನ್ಸಿಫ್ ಮತ್ತು ಜೆಎಂಎಫ್‌ಸಿ ಕೋರ್ಟುಗಳು | 2,57,800 | 2,42,556 | 5,00,358 |
| | ಒಟ್ಟು | 7,82,367 | 6,32,138 | 14,14,505 |

ಆ) ಪ್ರಕರಣಗಳ ಶೀಘ್ರ ವಿಲೇವಾರಿಗೆ ಈ ಕೆಳಕಂಡ ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಗಿದೆ

1) ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರ ಹಾಗೂ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡುವುದು
2) ನ್ಯಾಯಾಲಯಗಳು ಇಲ್ಲದೆ ಇರುವ ಕಡೆಗಳಲ್ಲಿ ಹೊಸ ನ್ಯಾಯಾಲಯಗಳ ಸ್ಥಾಪನೆ
3) ಮೊಕದ್ದಮೆಗಳ ಸಂಖ್ಯೆ ಹೆಚ್ಚಾಗಿರುವ ಸ್ಥಳಗಳಲ್ಲಿ ಅಧಿಕ ನ್ಯಾಯಾಲಯಗಳ ಸ್ಥಾಪನೆ
4) ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಾನೂನು ನೆರವು ಸಮಿತಿಗಳ ಮೂಲಕ ಜನತಾ ನ್ಯಾಯಾಲಯ ಶಿಬಿರಗಳನ್ನು ಕಾಲಬದ್ಧವಾಗಿ ನಡೆಸುವುದು
5) 5 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಇತ್ಯರ್ಥವಾಗದೇ ಬಾಕಿ ಉಳಿದಿರುವ ಹಾಗೂ ಸಮಾಜದ ಮೇಲೆ ದುಷ್ಪರಿಣಾಮ ಬೀರದ ಪ್ರಕರಣಗಳನ್ನು ನ್ಯಾಯಾಲಯದಿಂದ ಹಿಂತೆಗೆದುಕೊಳ್ಳುವುದನ್ನು ಪರಿಶೀಲಿಸಲು ಸಮಿತಿ ರಚನೆ. ಸಮಿತಿ ಒಂದು ಸಭೆ ನಡೆಸಿದೆ.